ತಮಿಳುನಾಡಿನ ಕುಂಭಕೋಣಂನಿಂದ ಮೈಸೂರಿಗೆ ಬಂದು ಸೆಟ್ಲ್ ಆದ ವ್ಯಕ್ತಿ ಆರ್ಮುಗಂ. ಇನ್ನೂ ಮದುವೆಯಾಗಿಲ್ಲ. ವ್ಯವಹಾರಕ್ಕೆ ಸಾಕಾಗುವಷ್ಟು ಕನ್ನಡವನ್ನು ಕಷ್ಟ ಹಾಗೂ ಇಷ್ಟಪಟ್ಟು ಕಲಿತಿದ್ದಾನೆ. ಬರೆಯುವುದಕ್ಕೂ, ಓದುವುದಕ್ಕೂ ಒಂದಿಷ್ಟು ಕಲಿತಿದ್ದಾನೆ.

ಕನ್ನಡ ಬರೆಯುವುದು, ಓದುವುದು ತಮಿಳಿನಂತೆ ಕಷ್ಟವಲ್ಲ. ಕನ್ನಡದಲ್ಲಿ ನಾವು ಏನು ಬರೆಯುತ್ತೇವೋ ಅದನ್ನೇ ಓದುತ್ತೇವೆ. ಆದರೆ ತಮಿಳಿನ ಕತೆ ಹಾಗಲ್ಲ. ಅವರು ಗಾಂಧಿ ಅಂತ ಬರೆದರೆ ಅದನ್ನು ಕಾಂತಿ ಅಂತ ಬೇಕಾದರೂ ಓದಬಹುದು. ಅದು ಅವರವರಿಗೆ ಬಿಟ್ಟ ವಿಚಾರ. ಇದು ಯಾಕೆ ಹೀಗೆ ಅಂತ ಪತ್ತೇದಾರಿಕೆ ಮಾಡ ಹೊರಟರೆ ಕುತೂಹಲಕರ ವಿಚಾರ ತೆರೆದುಕೊಳ್ಳುತ್ತದೆ.

ಈಗ ಕನ್ನಡದಲ್ಲಿ ಕ ಖ ಗ ಘ ಇವೆಯಲ್ಲವೇ? ಈ ನಾಲ್ಕೂ ಅಕ್ಷರಗಳಿಗೆ ತಮಿಳಿನಲ್ಲಿ ಒಂದೇ ಲಿಪಿ! ಆ ಒಂದು ಲಿಪಿಯನ್ನು ನೀವು ನಾಲ್ಕೂ ರೀತಿಯಲ್ಲಿ ಉಚ್ಚಾರ ಮಾಡಬಹುದು! ಅದೇ ರೀತಿ, ಚ ಛ ಜ ಝ ಗಳಿಗೂ ಒಂದೇ ಲಿಪಿ. ಟಠ ಡಢಗಳಿಗೂ ಒಂದೇ ಲಿಪಿ. ಹಾಗೆಯೇ ತಥ ದಧ ಹಾಗೂ ಪಫ ಬಭಗಳಿಗೂ ಒಂದೊಂದೇ ಲಿಪಿ. ಹೀಗೆ ಜಿಪುಣತನದಿಂದ ಲಿಪಿಗಳ ಉಳಿತಾಯ ಮಾಡಿ ತಮಿಳರು ಏನು ಸಾಧಿಸಿದ್ದಾರೋ ಗೊತ್ತಿಲ್ಲ. ಆದರೆ, ಇದರಿಂದಾಗಿ ನೀವು ತಮಿಳು ಭಾಷೆಯನ್ನು ಕಲಿಯದೆ ಕೇವಲ ವರ್ಣಮಾಲೆಯನ್ನು ಕಲಿತು ಪುಸ್ತಕ ಓದಲಿಕ್ಕೆ ಸಾಧ್ಯವೇ ಇಲ್ಲ!

ಈ ಕಾರಣಗಳಿಂದ ಆರ್ಮುಗಂಗೆ ಕನ್ನಡದ ವರ್ಣಮಾಲೆಯನ್ನು ನೋಡಿ ಅಚ್ಚರಿಯೋ ಅಚ್ಚರಿ. ಜೊತೆಗೆ ಸಂತೋಷ ಬೇರೆ. ಒಂದೊಂದು ವ್ಯಂಜನಕ್ಕೆ ಒಂದೊಂದು ಲಿಪಿ! ಯಾರಿಗುಂಟು ಯಾರಿಗಿಲ್ಲ! ಲಿಪಿಗೆ ಸಂಬಂಧಿಸಿದ ವಿಚಾರದಲ್ಲಿ ಕನ್ನಡಿಗರ ಧಾರಾಳತನಕ್ಕೆ ಆರ್ಮುಗಂ ನಿಜಕ್ಕೂ ಸಂತೋಷಗೊಂಡಿದ್ದ.

ಆದರೆ ಆರ್ಮುಗಂನಿಗೆ ಕನ್ನಡ ಭಾಷೆಯಲ್ಲಿ ಹಲವಾರು ಸಮಸ್ಯೆಗಳು ಎದುರಾದುದುಂಟು. ಅವನು ಆಗಾಗ ನನ್ನನ್ನು ಭೇಟಿಯಾಗಿ ತನ್ನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಕೊಳ್ಳುತ್ತಿದ್ದ.

ಅವನ ಕೆಲವು ಸಮಸ್ಯೆಗಳು ನಮಗೂ ಕುತೂಹಲ ಅನ್ನಿಸಿದ್ದು ಸುಳ್ಳಲ್ಲ. ಕೆಲವೊಮ್ಮೆ ಉತ್ತರವೇ ಹೊಳೆಯದೆ ಕನ್ನಡ ಪಂಡಿತನಾದ ನಾನೂ ಗೊಂದಲಕ್ಕೆ ಒಳಗಾದದ್ದುಂಟು. ಉದಾಹರಣೆಗೆ ಕನ್ನಡದಲ್ಲಿ ಒಂದು ಸಸ್ತನಿ ಪ್ರಾಣಿಯ ಹೆಸರು 'ಎಮ್ಮೆ' ಅಂತಿದೆ. ಒಂದು ಸಾರಿ ಈ ಆರ್ಮುಗಂ, 'ಸಾರ್, ಇವತ್ತು ನಮ್ಮ ಮನೆಯ ಗೇಟಿನ ಮುಂದೆ ಎಲ್ಲಿಂದಲೋ ಒಂದು ಗಂಡು ಎಮ್ಮೆ ಬಂದು ಮಲಗಿ ಬಿಟ್ಟಿತ್ತು. ಅದನ್ನು ಅಲ್ಲಿಂದ ಎಬ್ಬಿಸಿ ಗೇಟು ತೆರೆಯುವ ಹೊತ್ತಿಗೆ ಸಾಕಾಗಿ ಹೋಯಿತು' ಅಂದ! ಅವನ ಮಾತಿನಿಂದ ನನಗೆ ನಗು ತಡೆದುಕೊಳ್ಳಲಿಕ್ಕಾಗಲಿಲ್ಲ. ನಾನೆಂದೆ: 'ಗಂಡು ಎಮ್ಮೆ ಅಂತ ಹೇಳಬಾರದು ಮಾರಾಯ...'

'ಅದು ಗಂಡೇ ಸಾರ್, ಅದಕ್ಕೆ ಇನ್ನೇನೆಂದು ಹೇಳಲಿ?'

ಅದು ಗಂಡಾಗಿದ್ದರೆ ಅದನ್ನು 'ಕೋಣ' ಅಂತ ಕರೀಬೇಕು– ಅಂತ ತಿದ್ದಿದೆ.

'ಹಾಗಿದ್ದರೆ ಹೆಣ್ಣು ಕೋಣಕ್ಕೆ ಎಮ್ಮೆ ಅನ್ನಬಹುದಲ್ಲವಾ ಸಾರ್?'

'ಹೆಣ್ಣು ಕೋಣ, ಗಂಡು ಎಮ್ಮೆ – ಇವೆಲ್ಲಾ ಎಂಥಾ ಪ್ರಯೋಗವಯ್ಯಾ ಆರ್ಮುಗಂ ? ಈ ಥರದ ಪದಗಳು ಕನ್ನಡದಲ್ಲಿ ಇಲ್ಲ. ಆ ಪ್ರಾಣಿ ಹೆಣ್ಣಾಗಿದ್ದರೆ ಎಮ್ಮೆ, ಗಂಡಾಗಿದ್ದರೆ ಕೋಣ ಅಂದರಾಯಿತು' ಅಂತ ಸ್ಪಷ್ಟ ಪಡಿಸಿದೆ. ಆರ್ಮುಗಂನ ಈ ಕನ್ನಡ ಕಲಿಕೆಯ ಪ್ರಯೋಗ ನನಗೆ ನಗು ತಂದದ್ದಂತೂ ಸುಳ್ಳಲ್ಲ.

ಆದರೆ ಆರ್ಮುಗಂ ಅಷ್ಟಕ್ಕೆ ಸುಮ್ಮನಾಗುವ ಅಸಾಮಿ ಅಲ್ಲ. ಅವನ ಅನುಮಾನಗಳೇ ಹಾಗೆ. 'ಆದರೆ ಸಾರ್, ಇಂಗ್ಲಿಷಿನಲ್ಲಿ ಹಿ ಬಫೆಲೋ, ಷಿ ಬಫೆಲೋ ಅಂತಿದೆಯಲ್ಲಾ, ಅದೇ ಥರ ನಾನು ಗಂಡು ಎಮ್ಮೆ, ಹೆಣ್ಣು ಎಮ್ಮೆ ಅಂದುಕೊಂಡಿದ್ದೆ. ಹಾಗಾದರೆ ಅದು ತಪ್ಪೇ? ಮತ್ತೆ ಇಂಗ್ಲಿಷ್‌ನಲ್ಲಿ ಯಾಕೆ ಹಾಗಿದೆ?' ಎಂದು ಆರ್ಮುಗಂ ತನ್ನ ಗಂಡು– ಹೆಣ್ಣು ಎಮ್ಮೆಗಳನ್ನು ಹೆಮ್ಮೆಯಿಂದ ಸಮರ್ಥಿಸಿಕೊಂಡ!

'ಇಂಗ್ಲಿಷಿನಲ್ಲಿ ಎಮ್ಮೆ, ಕೋಣಗಳಿಗೆ ಬೇರೆ ಬೇರೆ ಪದಗಳಿಲ್ಲ. ಅದಕ್ಕೇ ಅವರು ಇರುವ ಒಂದು ಪದಕ್ಕೇ ಹಿ, ಷಿ ಅಂತ ಸೇರಿಸಿ ಮಾತಾಡ್ತಾರೆ' ಅಂದೆ.

'ಅಂದ್ರೆ ಇಂಗ್ಲಿಷಿನಲ್ಲಿ ಪದಗಳ ದಾರಿದ್ರ್ಯವಿದೆ ಅನ್ನಿ'– ಆರ್ಮುಗಂ ಅನುಮಾನ.

'ಪದಗಳ ದಾರಿದ್ರ್ಯವೋ ಏನೋ, ಆ ಭಾಷೆಯಲ್ಲಿ ಹಾಗಿದೆ ಅಷ್ಟೇ.' ಅಂದೆ.

'ಸಾರ್ ಇನ್ನೊಂದು ಸಮಸ್ಯೆ ಇದೆ...'

'ಯಾವುದು ಮಹರಾಯ ಆ ಸಮಸ್ಯೆ?'

'ಈಗ, ದನ, ಹಸು ಅಂದರೆ ಅವು ಹೆಣ್ಣಲ್ಲವೇ ಸಾರ್?'

'ಹೌದು'

'ಅದನ್ನು ಗಂಡು ದನ, ಹೆಣ್ಣು ದನ ಅಂದರಾಗದೇನು? ಅದಕ್ಕೂ ಬೇರೆ ಬೇರೆ ಪದಗಳಿವೆಯಾ?'

'ಹಾಗಾಗುವುದಿಲ್ಲ. ಆರ್ಮುಗಂ. ಯಾಕೆಂದರೆ ಗಂಡು ದನಕ್ಕೆ ಎತ್ತು, ಹೋರಿ ಅಂತ ಹೇಳಬೇಕು, ಗಂಡು ದನ ಅಂದ್ರೆ ಜನ ನಗ್ತಾರೆ. ಇನ್ನು ನೀನು ಹೇಳಿದೆಯಲ್ಲ – ಹೆಣ್ಣು ದನ ಅಂತ, ದನ ಅಂದರೆ ಸಾಕು. ಅದು ಹೆಣ್ಣು ಅಂತಲೇ ಅರ್ಥವಾಗುತ್ತೆ. ಆದರೆ, ನಾಯಿ, ಬೆಕ್ಕು, ಹುಲಿ ಇತ್ಯಾದಿ ಕೆಲವು ಪ್ರಾಣಿಗಳಿಗೆ ಹೆಣ್ಣು, ಗಂಡು ಅಂತ ಸೇರಿಸಿ ಮಾತಾಡಬೇಕಾಗುತ್ತದೆ. ಹೆಣ್ಣು ನಾಯಿ, ಗಂಡು ನಾಯಿ– ಹೀಗೆ. ಏಕೆಂದರೆ ಇಲ್ಲಿ ಹೆಣ್ಣು ಗಂಡುಗಳನ್ನು ಸೂಚಿಸೋಕೆ ಬೇರೆ ಬೇರೆ ಪದಗಳಿಲ್ಲ' ಅಂತ ವಿವರಿಸಿದೆ.

ಈ ಮಧ್ಯೆ ಈ ಆರ್ಮುಗಂ ಇನ್ನೊಂದು ಸಮಸ್ಯೆಯನ್ನು ಎದುರಿಟ್ಟ. 'ದುರ್ಯೋಧನ' ಅನ್ನುವ ಪದದಲ್ಲಿರುವ ಅರ್ಕಾವೊತ್ತನ್ನು 'ಯೋ' ಅಕ್ಷರದ ಮೊದಲು ಬರೆಯಬೇಕೋ, ನಂತರ ಬರೆಯ ಬೇಕೋ ಅನ್ನುವುದು ಅವನ ಕನ್‌ಫ್ಯೂಷನ್ನು. ಈ ವಿಚಾರದಲ್ಲಿ ತಿಳಿದವರೊಬ್ಬರನ್ನು ಈತ ವಿಚಾರಿಸಿದನಂತೆ. ಅವರು ಅವನ ಸಮಸ್ಯೆಯನ್ನು ತಾಳ್ಮೆಯಿಂದ ಕೇಳಿಸಿಕೊಂಡು ಹೇಳಿದರಂತೆ, 'ಇವತ್ತಿಗೂ ನನಗೂ ಇದೇ ಸಮಸ್ಯೆ ಕಣಪ್ಪಾ. ಅರ್ಕಾವೊತ್ತನ್ನು ಯೋ ದ ಮೊದಲು ಬರೆಯಬೇಕೋ ನಂತರ ಬರೆಯಬೇಕೋ ಅನ್ನೋದು ಗೊತ್ತಾಗ್ತಾ ಇಲ್ಲ. ತೀರ್ಮಾನ ಆದ್ಮೇಲೆ ನಿನಗೆ ತಿಳಿಸ್ತೀನಿ' ಅಂತ!

'ಅರ್ಕಾವೊತ್ತನ್ನು ಅಕ್ಷರದ ಹಿಂದೆ ಬರೆಯಬೇಕೋ ಮುಂದೆ ಬರೆಯಬೇಕೋ ಅನ್ನುವ ತೀರ್ಮಾನ ಆದ ಹಾಗಿಲ್ಲ. ಇನ್ನೂ ಅವರು ಏನೂ ಹೇಳಿಲ್ಲ' ಅಂದ ಆರ್ಮುಗಂ!

'ಆ ತಿಳಿದವರಿಗಿಂತ ಮೊದಲು ನೀನೇ ಅರ್ಕಾವತ್ತಿನ ವಿಚಾರ ತಿಳಿದುಕೋ' ಅಂತಂದು. ಅರ್ಕಾವೊತ್ತು ಹೇಗೆ ಬಳಸಬೇಕೆಂಬುದನ್ನು ಅವನಿಗೆ ಹೇಳಿಕೊಟ್ಟೆ. ಬಹಳ ಖುಷಿಯಾಯಿತು!

ಈ ಆರ್ಮುಗಂಗೆ ವಚನಗಳ ಸಮಸ್ಯೆಯೂ ಕಾಡಿದೆ. ಅವನು ಅದೊಂದು ದಿನ ತನ್ನ ಸಮಸ್ಯೆಯನ್ನು ನನ್ನ ಮುಂದಿಟ್ಟ. 'ಸಾರ್, ಈಗ ಪುಸ್ತಕ, ಪುಸ್ತಕಗಳು, ನಾಯಿ, ನಾಯಿಗಳು– ಹೀಗೆ ಏಕವಚನದಿಂದ ಬಹುವಚನ ಮಾಡಲು 'ಗಳು' ಸೇರಿಸ್ತೇವಲ್ಲವೇ? ಹಾಗೆಯೇ ಮಗು– ಮಗುಗಳು, ಹೆಂಗಸು– ಹೆಂಗಸುಗಳು ಅಂತ ಹೇಳದೆ ಮಕ್ಕಳು, ಹೆಂಗಸರು ಅಂತೇಕೆ ಹೇಳೋದು ಸಾರ್?'

'ಇದಕ್ಕೆಲ್ಲಾ ಲಾಜಿಕ್ ಇರಲ್ಲ ಮಹರಾಯ. ಈಗ ಅಕ್ಕ– ಅಕ್ಕಂದಿರು, ಗಂಡ–ಗಂಡಂದಿರು ಅನ್ನುತ್ತೇವಲ್ಲದೆ ಅಕ್ಕಗಳು, ಗಂಡಗಳು ಅನ್ನೋದಿಲ್ಲ. ಅಕ್ಕಂದಿರು ಅಂದಂತೆ ತಂಗಿಂದಿರು ಅನ್ನೋದಿಲ್ಲ. ತಂಗಿಯರು ಅನ್ನಬೇಕು. ಎಲ್ಲದಕ್ಕೂ ಗಳು ಸೇರಿಸಿ ಬಹುವಚನ ಮಾಡಲು ಬರೋದಿಲ್ಲ. ಇವೆಲ್ಲ ರೂಢಿಯಿಂದ ನಿನಗೆ ಗೊತ್ತಾಗುತ್ತೆ. ಮೊದಲು ನೀನು ದಿನಾ ಕನ್ನಡ ಮಾತನಾಡೋದನ್ನು ರೂಢಿಸಿಕೋ' ಅಂತ ವಿವರಿಸಿದೆ.

ಲಾಜಿಕ್ಕೇ ಇಲ್ಲದ ಇಂತಹ ವಿಚಾರಗಳನ್ನು ಹೇಗಪ್ಪಾ ತೀರ್ಮಾನಿಸೋದು ಅಂತ ಯೋಚಿಸುತ್ತಿದ್ದ ಹಾಗಿತ್ತು, ಅವನ ಮುಖಭಾವ! ಈ ಲಾಜಿಕ್ಕಿನ ಬಗ್ಗೆ ನನಗೂ ಅನುಮಾನಗಳಿವೆ. ಆದರೆ ಆರ್ಮುಗಂ ಮುಂದೆ ಅದನ್ನು ಬಾಯಿ ಬಿಡಲಾದೀತೆ? ಕನ್ನಡದ ಇನ್ನು ಯಾವ ಯಾವ ಸಮಸ್ಯೆಗಳನ್ನು ಹಿಡಿದುಕೊಂಡು ಈ ತಮಿಳು ಆರ್ಮುಗಂ ನನ್ನ ಹತ್ತಿರ ಬರುತ್ತಾನೋ ಅಂತ ಕಾಯ್ತಿದೀನಿ! ●